# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕೆಂಪೇಗೌಡನಗರ ಉಪವಿಭಾಗ,

## ಬೃ.ಬೆಂ.ಮ.ಪಾಲಿಕೆ ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು

ಸಂಖ್ಯೆ:ಸ.ಇಂ/ವಾ-119/ವಾರ್ಡ್‌ಸಭೆ/2021-22 ದಿನಾಂಕ:

## ವಾರ್ಡ್ -119ರ ವಾರ್ಡ್ ಸಭೆಯ ನಡವಳಿ

ದಿನಾಂಕ:20-05-2022ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್-119 ರ ವಾರ್ಡ್ ಕಛೇರಿಯಲ್ಲಿ ಶ್ರೀ.ಎಸ್.ಟಿ.ಶ್ರೀನಿವಾಸ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು(ಟಿ.ಇ.ಸಿ)ವಿಭಾಗ ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದವರು:-

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ.ಎಸ್.ಟಿ.ಶ್ರೀನಿವಾಸ್ | ನೋಡಲ್ ಅಧಿಕಾರಿಗಳು | 9739520995 |
| 2 | ಶ್ರೀ.ಕೆ.ಎಸ್.ವಿಜಯ್‌ಕುಮಾರ್ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:119 | 9480688119 |
| 3 | ಆರ್.ದೊರೈಸ್ವಾಮಿ | ಕಂದಾಯ ಪರಿವೀಕ್ಷಕರು ವಾರ್ಡ್-119 | 9900595529 |
| 4 | ಮಹದೇವಪ್ಪ | ಕಿರಿಯ ಅಭಿಯಂತರರು ಬೆಸ್ಕಾಂ | 9449875558 |
| 5 | ಬಿ.ಎಲ್.ಅರವಿಂದ್ | ಕೆಲಸ ಪರಿವೀಕ್ಷಕರು-ಬಿ.ಡಬ್ಲ್ಯೂ.ಎಸ್.ಎಸ್.ಬಿ | 9448314149 |
| 6 | ಎಂ.ಬಾಬುಕುಮಾರ್ | ಕೆಲಸ ಪರಿವೀಕ್ಷಕರು ವಾರ್ಡ್-119 | 9008233973 |
| 7 | ಎನ್.ನಾಗರಾಜು | ಕಿರಿಯ ಆರೋಗ್ಯ ಪರಿವೀಕ್ಷಕರು | 8073493562 |
| 8 | ಸಂದೇಶ್.ಹೆಚ್.ಎಂ | ಸ.ಅ(ವಾರ್ಡ್-119) | 9611667101 |
| 9 | ಮಂಜುನಾಥ್ | ಸ್ಥಳೀಯರು | 9880464333 |
| 10 | ರಾಕೇಶ್ | ಸ್ಥಳೀಯರು | 7019916203 |
| 11 | ಕೆ.ಸತೀಶ್ | ಸ್ಥಳೀಯರು | 7899555577 |
| 12 | ಮಹೇಂದ್ರ ವರ್ಮ | ಸ್ಥಳೀಯರು | 7204227806 |
| 13 | ವಿಜಯ್‌ಕುಮಾರ್ | ಸ್ಥಳೀಯರು | 8123055742 |
| 14 | ಶಿವಕುಮಾರ್ | ಸ್ಥಳೀಯರು | 7892288628 |

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಎಲ್ಲರನ್ನು ಸ್ವಾಗತದೊಂದಿಗೆ ಪರಸ್ಪರ ಪರಿಚಯ ಮಾಡಿಕೊಳ್ಳಲು ತಿಳಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

ಚರ್ಚಿಸಲಾದ ವಿಷಯಗಳು:-

1. <u>ಕಾಮಗಾರಿ ಇಲಾಖೆ:-</u>

ಕಾಮಗಾರಿ ವಿಷಯವಾಗಿ ಚರ್ಚಿಸಲಾಗಿ ಸ್ಥಳೀಯರು ಪಿ.ಆರ್.ಲೇನ್, ಪಿ.ಪಿ.ಲೇನ್, ಟಿ.ಪಿ.ಲೇನ್, ಈ ರಸ್ತೆಗಳಿಂದ ನೀರು ಸರಾಗವಾಗಿ ಹರಿಯಲು ನೂತನವಾಗಿ culvert ಗಳನ್ನು ನಿರ್ಮಿಸಬೇಕೆಂದು ಕೋರಿರುತ್ತಾರೆ. ಹಾಗೂ ಪೈಲ್ವಾನ್ ರಸ್ತೆಯಲ್ಲಿ ಪಾದಚಾರಿ ಮಾರ್ಗದ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕೆಂದು ಕೋರಿರುತ್ತಾರೆ. ನೂತನ ನಾಮಫಲಕಗಳನ್ನು ಅಳವಡಿಸಬೇಕೆಂದು ಕೋರಿರುತ್ತಾರೆ. ಕಟ್ಟಡದ ಮೇಲ್ಛಾವಣಿಯಿಂದ ಬರುವ ಮಳೆ ನೀರನ್ನು ರಸ್ತೆ ಬಿಟ್ಟಿರುವುದರಿಂದ ರಸ್ತೆಯಲ್ಲಿ ನೀರು ಬಂದು ಸಾರ್ವಜನಿಕರಿಗೆ ಓಡಾಡಲು ತೊಂದರೆಯುಂಟಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಮಾನ್ಯ ನೋಡಲ್ ಅಧಿಕಾರಿಗಳು ರವರು ಅನುಮತಿಯೊಂದಿಗೆ ವಾರ್ಡ್ ಅಭಿಯಂತರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2022-23ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ಸಂಖ್ಯೆ 119 ರಲ್ಲಿನ ಚರಂಡಿ ಹಾಗೂ ಪಾದಚಾರಿ ಮಾರ್ಗಗಳ ದುರಸ್ಥಿಗಾಗಿ ಹಾಗೂ ವಾರ್ಷಿಕ ನಿರ್ವಹಣೆಗಾಗಿ ಮೀಸಲಿಟ್ಟಿರುವ ರೂ. 30.00 ಲಕ್ಷಗಳ ಅನುದಾನಕ್ಕೆ ಅನುಮೋದನೆ ನೀಡುವಂತೆ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ವಿಷಯವಾಗಿ ಚರ್ಚಿಸಲಾಗಿ ಸದರಿ ಕಾಮಗಾರಿ ("Name of Work: Annual maintenance and Improvements of footpath and drains in ward 119- 30.00 lakhs") ಸರ್ವಾನುಮತಿದಿಂದ ಸಭೆಯ ಅನುಮೋದನೆ ಪಡೆಯಲಾಯಿತು.

2. <u>ಘನತ್ಯಾಜ್ಯ ವಿಭಾಗ:-</u>

ಘನತ್ಯಾಜ್ಯ ವಿಷಯವಾಗಿ ಬೆಸ್ಕಾಂ ಅಭಿಯಂತರರು ಸಭೆ ಮತನಾಡಿ ಟ್ರಾನ್ಸ್ಫಾರ್ಮರ್ ಸುತ್ತಲು ಕಸ ಹಾಕುವುದರಿಂದ ಬೆಂಕಿ ಅಪಘಾತ ಉಂಟಾಗುತ್ತದೆ ಎಂದು ತಿಳಿಸುತ್ತಾ ಟ್ರಾನ್ಸ್ಫಾರ್ಮರ್ ಸುತ್ತುಮುತ್ತಲಿನಲ್ಲಿ ಕಸವನ್ನು ಕೂಡಲೇ ತೆರವುಗೊಳಿಸಲು ಕೋರಿರುತ್ತಾರೆ. ಮಳೆ ಬಂದಾಗ ರಸ್ತೆಯಲ್ಲಿ ಬರುವ ಮಣ್ಣು ಹಾಗೂ ಇತರೆಗಳನ್ನು ಮಳೆ ನಿಂತ ತಕ್ಷಣವೇ ತೆರವುಗೊಳಿಸಬೇಕೆಂದು ಕೋರಿರುತ್ತಾರೆ.

3. <u>ಆರೋಗ್ಯ ಇಲಾಖೆ</u>

ಸಭೆಯಲ್ಲಿ ಸ್ಥಳೀಯರು ಮಾತನಾಡಿ, ವಾರ್ಡ್‌ನಲ್ಲಿ ಸೊಳ್ಳೆಗಳು ಹೆಚ್ಚಾಗಿರುವುದರಿಂದ Fogging and Spraying ಅನ್ನು ಮಾಡಲು ಕೋರಿರುತ್ತಾರೆ. ಎಸ್.ಜೆ.ಉದ್ಯಾನವನದಲ್ಲಿ ಹಾವುಗಳು ಹೆಚ್ಚಾಗಿರುತ್ತದೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

4. <u>ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ</u>

ಸಿಟಿ ಮಾರ್ಕೆಟ್ ನಿಂದ ಟೌನ್‌ಹಾಲ್ ಬರುವ ರಸ್ತೆಯಲ್ಲಿ ಒಳಚರಂಡಿ ನೀರು ಸುಮಾರು 03 ದಿನಗಳಿಂದ ನಿಂತಿದ್ದು, ಈ ಕೂಡಲೇ ಒಳಚರಂಡಿಯನ್ನು ದುರಸ್ಥಿಗೊಳಿಸಿ ನೀರು ಸರಾಗವಾಗಿ ಹೋಗಲು ಸಭೆಯಲ್ಲಿ ಸೂಚಿಸಲಾಗಿರುತ್ತದೆ. ನಿಮ್ಮ ವತಿಯಿಂದ ಅನಧಿಕೃತವಾಗಿ ರಸ್ತೆ ಅಗೆಯಬಾರದೆಂದು ಹಾಗೂ ಈವರೆಗೂ ಅಗೆದಿರುವ ಗುಂಡಿಗಳನ್ನು ಕೂಡಲೇ ಮುಚ್ಚಬೇಕೆಂದು ಸಭೆಯಲ್ಲಿ ಸೂಚಿಸಲಾಗಿರುತ್ತದೆ. ಧರ್ಮರಾಯಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಪ್ರತಿ ದಿನ ಎರಡು ಬಾರಿ ಮ್ಯಾನ್‌ಹೋಲ್‌ನಿಂದ ಒಳಚರಂಡಿ ನೀರು ಉಕ್ಕಿ ಹರಿಯುತ್ತಿರುತ್ತದೆ ಆದುದರಿಂದ ಈ ಕೂಡಲೇ ಹೊಸದಾಗಿ ಒಳಚರಂಡಿ ಕೊಳವೆಗಳನ್ನು ಅಳವಡಿಸಬೇಕೆಂದು ಎಂದು ದೇವಸ್ಥಾನದ ಕಮಿಟಿಯವರು ಸಭೆಯಲ್ಲಿ ತಿಳಿಸಿರುತ್ತಾರೆ.

5. <u>ಬೆಸ್ಕಾಂ ಹಾಗೂ ವಿದ್ಯುತ್ ಇಲಾಖೆ</u>

ಬೀದಿ ದೀಪಗಳ ಕಾರ್ಯನಿರ್ವಹಿಸುತ್ತಿರುವುದಿಲ್ಲವೆಂದು ಹಾಗೂ ಹೊಸದಾಗಿ ಹಲವು ಕಡೆ ಬೀದಿ ದೀಪಗಳನ್ನು ಹೊಸದಾಗಿ ಅಳವಡಿಸಲು ಕೋರಿರುತ್ತಾರೆ. ಬೆಸ್ಕಾಂ ರವರು ಅನಧಿಕೃತವಾಗಿ ರಸ್ತೆ ಅಗೆಯಬಾರದೆಂದು ಹಾಗೂ ಈವರೆಗೂ ಅಗೆದಿರುವ ಗುಂಡಿಗಳನ್ನು ಕೂಡಲೇ ಮುಚ್ಚಬೇಕೆಂದು ಸಭೆಯಲ್ಲಿ ಸೂಚಿಸಲಾಗಿರುತ್ತದೆ.

6. ಅರಣ್ಯ ಇಲಾಖೆ

ದಾಸಪ್ಪ ಆಸ್ಪತ್ರೆಯ ಆವರಣದಲ್ಲಿ ಒಣಗಿದ ಕೊಂಬೆಗಳನ್ನು ಈ ಕೂಡಲೇ ತೆರವುಗೊಳಿಸಬೇಕೆಂದು ಹಾಗೂ ಕಾಂಪೌಂಡ್‌ನ ಹೊರಗಡೆ ಬಂದಿರುವ ಕೊಂಬೆಗಳನ್ನು ತೆರವುಗೊಳಿಸಬೇಕೆಂದು ಸಭೆಯಲ್ಲಿ ಸೂಚಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಕೆಲಸ ಪರಿವೀಕ್ಷಕರಿಗೆ ಮಳೆ ಹೆಚ್ಚಾಗಿರುವುದರಿಂದ ದೂರುಗಳನ್ನು ಕೂಡಲೇ ಸ್ಪಂದಿಸಬೇಕೆಂದು ತಿಳಿಸಿರುತ್ತಾರೆ ಹಾಗೂ ಮುಂದಿನ ಸಭೆಗೆ ಕಡ್ಡಾಯವಾಗಿ ಎಲ್ಲಾ ಅಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸೂಚಿಸಿ, ತಪ್ಪಿದಲ್ಲಿ ಹಾಜರಾಗದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಲು ತಿಳಿಸಿರುತ್ತಾರೆ. ಹಾಜರಿದ್ದ ಅಧಿಕಾರಿಗಳಿಗೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ –119 ಧರ್ಮರಾಯಸ್ವಾಮಿ ದೇವಸ್ಥಾನ

ನೋಡಲ್ ಅಧಿಕಾರಿಗಳು 20/5/2022
ವಾರ್ಡ್ ಸಂಖ್ಯೆ 119
Assistant Executive Engineer
Traffic Engineering Cell
Bruhat Bangalore Mahanagara Palike